**ಸಾಕ್ಷಿಯನ್ನು ದಿನಾಂಕಃ 18-12-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ವಾದಿ ಪರ ವಕೀಲರವರಿಂದಃ**

ನನ್ನ ಹೆಸರಿನಲ್ಲಿ ಯಾವುದೇ ಜಮೀನು ಇರುವುದಿಲ್ಲ. ದಾವಾ ಸ್ವತ್ತು ಕೋಡಿಹಳ್ಳಿಯಲ್ಲಿರುವುದು. ದಾವಾ ಸ್ವತ್ತು ಈಗ ಯಾರ ಹೆಸರಿನಲ್ಲಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಅಸ್ತಿಯನ್ನು ಯಾರು ಖರೀದಿ ಮಾಡಿದರು, ಯಾವಾ ಖರೀದಿ ಮಾಡಿದರು ಮತ್ತು ಯಾರ ಹೆಸರಿನಲ್ಲಿ ಖರೀದಿ ಮಾಡಿದರು ಎಂದು ನನಗೆ ಗೊತ್ತಿಲ್ಲ. ದಾವಾ ಅಸ್ತಿ ಜಂಟಿ ಕುಟುಂಬದ ಅಸ್ತಿ ಎಂದು ನನಗೆ ಖರೀಂ ಸಾಬ್ ಇವರ ಮಕ್ಕಳಿಂದ ಗೊತ್ತಾಗಿರುತ್ತದೆ. ಆ ಬಗ್ಗೆ ನಾನು ಯಾವುದೇ ದಾಖಲೆ ನೋಡಿರುವುದಿಲ್ಲ. ವಾದಿಯರ ಕುಟುಂಬದವರೇ ದಾವಾ ಅಸ್ತಿಯನ್ನು ಸಾಗುವಳಿ ಮಾಡುತ್ತಿರುವರು ಅಂದರೆ ಸರಿ. ಹವಾ ಬೀ ಮತ್ತು ಇಮಾಮ್ ಅಲೀ ಸಾಬ್ ಮತ್ತು ವಾರಸುದಾರರು ದಾವಾ ಅಸ್ತಿಯನ್ನು ಸಾಗುವಳಿ ಮಾಡುತ್ತಿರುವರು ಅಂದರೆ ಅವರದ್ದು ಅವರು ಮಾಡುವರು ಉಳಿದಿದ್ದದ್ದನ್ನು ಇಮಾಮ್ ಅಲೀ ರವರು ಮಾಡುತ್ತಿರುವರು. ವಾದಿಯರು ದಾವಾ ಅಸ್ತಿಯ ಸ್ವಾಧೀನ ಅನುಭುವದಲ್ಲಿ ಇದ್ದರೂ ಸಹಿತ ಪ್ರತಿವಾದಿಗಳ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾ ಅಸ್ತಿಯ ಸುತ್ತ ಮುತ್ತ ನನ್ನ ಜಮೀನು ಇರುವುದಿಲ್ಲ ಅಂದರೆ ಸ್ವಲ್ಪ ದೂರದಲ್ಲಿ ಇರುತ್ತದೆ. ಈ ಕೇಸಿನ ಬಗ್ಗೆ

**ಸಾಕ್ಷಿಯ ಸಹಿ** 18.12.2025

ನನಗೆ ಯಾವುದೇ ಮಾಹಿತಿ ಇರದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

**18-12-2025**
**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 18.12.2025